**ಹೆಂಡ್ತಿ:** ರೀ... ಏನು ಮಾಡ್ತಾ ಇದ್ದೀರಿ?
**ಗಂಡ:** ನೊಣ ಹೊಡೀತಾ ಇದ್ದೀನಿ.
**ಹೆಂಡ್ತಿ:** ಸಿಕ್ತಾ?
**ಗಂಡ:** ಹು... ಮೂರು ಗಂಡು, ಎರಡು ಹೆಣ್ಣು ನೊಣಗಳನ್ನು ಕೊಂದೆ.
**ಹೆಂಡ್ತಿ:** ಗಂಡು, ಹೆಣ್ಣು ನೊಣ ಅಂತ ಹೇಗೆ ಹೇಳ್ತೀರಿ?
**ಗಂಡ:** ಮೂರು ಬೀರ್ ಬಾಟಲ್ ಮೇಲೆ, ಎರಡು ಫೋನ್ ಮೇಲೆ ಕೂತ್ಕೊಂಡು ಇದ್ದವು!


***

**ಹೆಂಡ್ತಿ:** ರೀ, ನಾನು ನಿಮಗಾಗಿ ಎಷ್ಟೊಂದು ಕೆಲಸಗಳನ್ನು ಮಾಡಿದ್ದೇನೆ ಗೊತ್ತಾ? ನಿಮ್ಮನ್ನ ಮದ್ವೆಯಾದ ನಂತರ ನನ್ನ ಕೈಗಳು ತುಂಬಾನೇ ಗಿಡ್ಡವಾಗಿವೆ ಕಣ್ರೀ!
**ಗಂಡ:** ಅದು ಹೇಗೆ ಹೇಳ್ತಿ?
**ಹೆಂಡ್ತಿ:** ಮುಂಚೆ ವ್ಯಾಯಾಮ ಮಾಡ್ತಾ ಇದ್ದಾಗ ಕೈಗಳಿಂದ ಕಾಲಿನ ಹೆಬ್ಬೆರಳನ್ನು ಮುಟ್ಟುತ್ತಿದ್ದೆ. ಆದರೆ ಈಗ ಕೈಗಳು ಮಂಡಿ ತನಕ ಮಾತ್ರ ಹೋಗ್ತವೆ ಅಷ್ಟೇ.
**ಗಂಡ:** ಕೆಲಸ ಮಾಡಿ ಗಿಡ್ಡ ಆಗಿರುವುದಲ್ಲ ಏನೂ ಕೆಲಸ ಮಾಡದೇ ಗಿಡ್ಡ ಆಗಿರೋದು.

***

ತಾತ ವೆಂಟಿಲೇಟರ್‌ನಲ್ಲಿದ್ದರು. ಮೂಗಿಗೆ ಪೈಪು, ಎದೆಯ ಮೇಲೆ ವೈರ್ ಹಾಕಿದ್ದರು. ನೋಡಲು ಬಂದ ಮೊಮ್ಮಗ ತಾಯಿಯನ್ನು ಹೀಗೆ ಕೇಳಿದ. ಅಮ್ಮಾ... ತಾತನನ್ನು ಚಾರ್ಜ್‌ಗೆ ಹಾಕಿದ್ದಾರಾ?

**ಸಾಧು:** ಕುಡಿದು, ಕುಡಿದು ನೀನು ನರಕಕ್ಕೆ ಹೋಗ್ತೀಯ.
**ಕುಡುಕ:** ನಂದಿರಲಿ, ಮದ್ಯ ಮಾರುವವ?
**ಸಾಧು:** ಅವನೂ ಹೋಗ್ತಾನೆ.
**ಕುಡುಕ:** ಚಿಕನ್ ಮಾರುವವ?



ನಿನಗೆ ಉಚಿತ ....! ಕಂದ!



ಇಲ್ಲಿ ವರೆಗೆ ಬಂತೋ... ವಿಶ್ವ ಕಪ್ ಕ್ರಿಕೆಟ್!

**ಸಾಧು:** ಅವನೂ.
**ಕುಡುಕ:** ಇಷ್ಟು ಸಾಕು ಬಿಡಿ. ಅವರಿಬ್ಬರೂ ಅಲ್ಲಿದ್ದ ಮೇಲೆ ಅದೇ ನನಗೆ ಸ್ವರ್ಗ!

***

ಹೆಂಡ್ತಿ ತನ್ನ ಕೈಬೆರಳ ಸನ್ನೆಯಿಂದ ಗಂಡನನ್ನು ಕರೆದಳು. ಸೋಫಾದಲ್ಲಿ ಕೂತಿದ್ದ ಗಂಡ ಎದ್ದು ಬಂದ.
**ಗಂಡ:** ಏನು ಹೇಳು?
**ಹೆಂಡ್ತಿ:** ಏನಿಲ್ಲ, ನನ್ನ ಬೆರಳಿನಲ್ಲಿರೋ ಶಕ್ತಿ ಎಷ್ಟು ಅಂತ ಟೆಸ್ಟ್ ಮಾಡಿದೆ ಅಷ್ಟೆ.

***

ವಿಜ್ಞಾನದ ತರಗತಿಯಲ್ಲಿ...
**ಅಧ್ಯಾಪಕ:** ತಿಮ್ಮ, ಸಕ್ಕರೆಯನ್ನು ನಮ್ಮ ಶತ್ರು ಅಂತಾರೆ ಯಾಕೆ?
**ತಿಮ್ಮ:** ಅದನ್ನು ಹಿಂದಿಯಲ್ಲಿ ಚೀನೀ ಅನ್ನುತ್ತಾರೆ. ಅದು ಕರಗಿದಾಗ ಪಾಕ ಆಗುತ್ತದೆ ಅದಕ್ಕೆ.

***

**ಹೆಂಡ್ತಿ:** (ಪತ್ರಿಕೆ ಓದುತ್ತಾ...) ಸಾರಿಗೆ ಬಸ್ಸು ಬಿದ್ದು ಐವರು ಗಂಭೀರ!
**ಗಂಡ:** ಇವತ್ತು ಬೆಳಿಗ್ಗೆಯಿಂದ ಇದರದೇ ಮಂಡೆ ಬಿಸಿ ಮಾರಾಯ್ರೆ. ಅಷ್ಟು ದೊಡ್ಡ ಬಸ್ಸು ಸಾರಿಗೆ ಬೀಳಬೇಕಾದರೆ ಸಾರಿನ ಪಾತ್ರೆ ಎಷ್ಟು ದೊಡ್ಡದಾಗಿರಬಹುದು!

***

**ಗಂಡ:** ಉಫ್... ಅಂತ ಮೂರು ಸಲ ಊದಿದ್ರೂ ಕ್ಯಾಂಡಲ್ ಆರ್ತಾ ಇಲ್ಲ. ಬಹುಶಃ ಆಕ್ಸಿಜನ್ ಲೆವೆಲ್ ಕಡಿಮೆ ಆಯಿತೋ ಏನೋ?
**ಹೆಂಡ್ತಿ:** ಓಹ್ ಮಾರಾಯ್ರೆ, ಮುಖದ ಮೇಲಿನ ಮಾಸ್ಕ್ ಮೊದಲು ತೆಗೆಯಿರಿ.

***

**ಹೆಂಡ್ತಿ:** ರೀ... ಚಪಾತಿ ಜೊತೆ ಜೇನುತುಪ್ಪ ಕೊಡಲಾ?
**ಗಂಡ:** ಛೀ... ಬೇಡ ಕಣೇ. ಅದು ಹುಳದ ಬಾಯಿಂದ ಬಂದಿರುತ್ತೆ.
**ಹೆಂಡ್ತಿ:** ಹಾಗಾದ್ರೆ ಮೊಟ್ಟೆ ಕೊಡಲಾ?

ಸಂಗ್ರಹ: **ಶ್ರುತಿ ಎಸ್., ಬೆಂಗಳೂರು**

**ರವಿ:** ಶೇಖರ, ನಿನಗೆ ಎರಡು ಮೆಡಲ್ ಕೊಟ್ಟಿದ್ದಾರಲ್ಲ ಏಕೆ?
**ಶೇಖರ:** ಈ ಎರಡು ಮೆಡಲ್‌ಗಳನ್ನು ಹಾಡು ನಿಲ್ಲಿಸೋದಕ್ಕೆ ವಿಶೇಷವಾಗಿ ಕೊಟ್ಟರು!

***

**ಮಹೇಶ:** ಪರಮೇಶಿ, ಕೋಪ ಮಾಡಿಕೊಳ್ಳುವ ಹೆಂಗಸರ ಹಿಂದೆ ಒಬ್ಬ ಪುರುಷ ಇದ್ದೇ ಇರುತ್ತಾನೆ ಅಂತಾರಲ್ಲ?
**ಪರಮೇಶಿ:** ಖಂಡಿತ, ಆದರೆ ಅವಳ ಕೋಪಕ್ಕೆ ಕಾರಣ ಏನು ಅಂತ ಅವನಿಗೂ ಗೊತ್ತಿರುವುದಿಲ್ಲ!

***

**ಸುಶೀಲಮ್ಮ:** ಏನ್ರಿ, ಗೌರಮ್ಮ ನಿಮ್ಮ ಮನೆಗೆಲಸದವಳನ್ನು ಬಿಡಿಸಿ ಬಿಟ್ರಂತೆ?
**ಗೌರಮ್ಮ:** ಹೌದು.
**ಸುಶೀಲಮ್ಮ:** ಏಕೆ?
**ಗೌರಮ್ಮ:** ಅವಳೇನೋ ಬರ್ತಾಳೆ, ಕೆಲಸ ಮಾಡಿ ಹೋಗ್ತಾಳೆ. ಒಬ್ಬರ ಮನೆ ವಿಷಯ ಏನೂ ಮಾತಾಡುವುದೇ ಇಲ್ಲ!

***

**ಆತ:** ಕೊರೊನಾದಿಂದ ಸತ್ತವರು ಸ್ವರ್ಗಕ್ಕೆ ಹೋಗುತ್ತಾರೋ, ನರಕಕ್ಕೋ?
**ಈತ:** ಖಂಡಿತ ಸ್ವರ್ಗಕ್ಕೆ.
**ಆತ:** ಹೇಗೆ ಹೇಳ್ತಿಯೇ?
**ಈತ:** ನರಕವನ್ನು ಇಲ್ಲಿಯೇ ಅನುಭವಿಸಿರುತ್ತಾರಲ್ಲ!

***

**ಭಾಷಣಕಾರ:** ನನ್ನ ಭಾಷಣದಲ್ಲಿ ಯಾವುದು ಮೆಚ್ಚುಗೆಯಾಯಿತು?
**ಆತ:** ನೀವು ಭಾಷಣ ಮುಗಿಸಿದ್ದು!

***

**ಕೃಷ್ಣ:** ಮೂರ್ತಿ, ನಿಮ್ಮ ಮನೆಯಲ್ಲಿ ಉಪ್ಪಿಟ್ಟು ಪಾಯಸ ಅಂದ್ರೆ ನಿನಗೇಕೆ ಬೇಜಾರು?
**ಮೂರ್ತಿ:** ಉಪ್ಪಿಟ್ಟಿನಲ್ಲಿ ಬರೀ ಮೆಣಸಿನಕಾಯಿ ಸಿಗುತ್ತದೆ, ಆದರೆ ಪಾಯಸದಲ್ಲಿ ಒಂದೂ ಗೋಡಂಬಿ ಸಿಗೋದೇ ಇಲ್ಲ!

***

**ಶಿಕ್ಷಕ:** ಬೇರೆಯವರು ಕಷ್ಟದಲ್ಲಿರುವಾಗ ನಾವು ಕೈಲಾದ ಸಹಾಯ ಮಾಡ್ಬೇಕು.
**ವಿದ್ಯಾರ್ಥಿ:** ನೀವು ಹೇಳುತ್ತಿರುವ ಮಾತು ಸುಳ್ಳು ಮೇಡಂ.
**ಶಿಕ್ಷಕ:** ಈ ಮಾತು ಸುಳ್ಳು ಅಂತ ಹೇಗೆ ಹೇಳ್ತಿಯಾ?
**ವಿದ್ಯಾರ್ಥಿ:** ಪರೀಕ್ಷೆ ಬರೆಯುವಾಗ, ನನ್ನ ಕಷ್ಟ ನೋಡಿ ಎಂದಾದರೂ ನೀವು ಸಹಾಯ ಮಾಡಿದ್ದೀರಾ ಮೇಡಂ!

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**